# ಕರ್ನಾಟಕ ವಿಧಾನ ಪರಿಷತ್ತು

## ಶ್ರೀಮತಿ ಹೇಮಲತಾ ನಾಯಕ, ಮಾನ್ಯ ಸದಸ್ಯರು ವಿಧಾನ ಪರಿಷತ್ ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.

**ಶೂನ್ಯ ವೇಳೆಯ ವಿಷಯ:** ದಿನಾಂಕ: 18/03/2025 ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ಉಲ್ಲೇಖಿಸಿ ವಿಧವೆ ನಗ್ನಗೊಳಸಿ ಕ್ರೌರ್ಯ? ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಸವದತ್ತಿ ತಾಲೂಕಿನ ಉಗರಗೋಳ ಸಮಿಪದ ಹರ್ಲಾ ಪುರದಲ್ಲಿ ವಿಧವೆಯೆಬ್ಬಳನ್ನು ಬೆತ್ತಲೆಗೊಳಿಸಿ ಕ್ರೌರ್ಯ ಮೆರೆದಿರುವ ಅಮಾನವೀಯ ಘಟನೆ ನಡೆದಿದೆ. ಹರಿದ ಬಟ್ಟೆಯಲ್ಲಿ ಠಾಣೆಗೆ ಹೋದರೂ ಕೂಡ ಪೊಲೀಸರು ಇಲ್ಲಿಯವರೆಗೆ ಪ್ರಕರಣ ದಾಖಲು ಮಾಡಿಕೊಂಡಿಲ್ಲ ಎಂದು 5 ವರ್ಷದ ಸಂತ್ರಸ್ತೆ ಆರೋಪಿಸಿದ್ದಾರೆ.

ಉಗರಗೋಳದ ಹರ್ಲಾಪುರದಲ್ಲಿ ನಡೆದ ಘಟನೆ ಬಗ್ಗೆ ಸಂತ್ರಸ್ತೆ ಆಮೂಲಾಗ್ರವಾಗಿ ಸಂಯುಕ್ತ ಕರ್ನಾಟಕ, ವರದಿಗಾರರಿಗೆ ವಿವರಿಸಿದ್ದಾರೆ. ಅಷ್ಟೇ ಅಲ್ಲ ಆಕೆ ಕೆಲವೊಂದು ವಿಡಿಯೋ ತುಣುಕು, ಆಡಿಯೋ ಸಂಭಾಷಣೆ, ಜಗಳ ನಡೆಯುತ್ತಿರುವ ಸಂದರ್ಭದಲ್ಲಿ ಪೊಲೀಸರು ಇದ್ದ ವಿಡಿಯೋ ಎಲ್ಲವನ್ನು ಸಾಕ್ಷಿಯಾಗಿಟ್ಟುಕೊಂಡು ಈಗ ನ್ಯಾಯ ಕೋರಿ ಮಾಧ್ಯಮದ ಮೊರೆ ಹೋಗಿದ್ದಾರೆ.

ಘಟನೆ: ಹರ್ಲಾಪುರದ ಹತ್ತು ಎಕರೆ ಜಮೀನು ವ್ಯವಹಾರಕ್ಕೆ ಸಂಬಂಧಿಸಿದಂತೆ ನಡೆದ ಘಟನೆ ಇದು, ಈ ಜಮೀನು ವಿವಾದಕ್ಕೆ ಕೋರ್ಟನಿಂದ ತಡೆಯಾಜ್ಞೆ ಕೂಡ ಇತ್ತು. ಜಮೀನಿನಲ್ಲಿ ಬೆಳೆದ ಹುರುಳಿ ಒಂದೆಡೆ ಕೂಡಿಹಾಕಿ ಚೀಲ ತುಂಬಬೇಕು ಎನ್ನುವಾಗ ರೈತ ಸಂಘದ ಹೆಸರಿನಲ್ಲಿ ಸುಮಾರು 15ಕ್ಕೂ ಹೆಚ್ಚು ಜನ ಬಂದು ನಮ್ಮೊಂದಿಗೆ ವಾದ ಮಾಡಿದರು.

ಪೊಲೀಸರ ಎದುರೇ ನಡೆದ ಹಲ್ಲೆ? ನನ್ನ ಮೇಲೆ ಹಲ್ಲೆ ನಡೆದ ಬಳಿಕ ಪೊಲೀಸರು ಆಗಮಿಸಿದರು. ಆ ಸಂದರ್ಭದಲ್ಲಿ ಪೊಲೀಸ್ ಸಮ್ಮುಖದಲ್ಲಿಯೂ ಕೂಡ ಆ ಗುಂಪು ನನ್ನನ್ನು ನಿಂದಿಸಿತು. ಕೊನೆಗೆ ನಾನು ಹರಿದ ಬಟ್ಟೆಯನ್ನೇ ಸುತ್ತಿಕೊಂಡು ಅದೇ ವಾಹನದಲ್ಲಿ ಠಾಣೆಗೆ ಹೋದೆ. ಠಾಣೆ ತಲುಪಿದ ತಕ್ಷಣ ಇಬ್ಬರು ಮಹಿಳಾ ಪೊಲೀಸರು ಬೆಡ್‌ಶೀಟ್ ತಂದುಕೊಟ್ಟರು. ಅದನ್ನು ಸುತ್ತಿಕೊಂಡು ಹೋಗಿ ದೂರು ಹೇಳಿದರೂ ಪೊಲೀಸರು ದಾಖಲಿಸಿಕೊಳ್ಳಲಿಲ್ಲ ಎಂದು ಸಂತ್ರಸ್ತೆ ವಿವರಿಸಿದ್ದಾರೆ.

ಬೆತ್ತಲುಗೊಳಿಸಿದ್ದಕ್ಕೆ ಸಾಕ್ಷಿ ಕೇಳಿದ ಪೊಲೀಸರು ; ಘಟನೆಯನ್ನು ಗಂಭೀರವಾಗಿ ಪರಿಗಣಿಸಬೇಕಿದ್ದ ಸವದತ್ತಿ ಪೊಲೀಸರು ನೊಂದವಳಿಗೆ ನ್ಯಾಯ ಕೊಡಿಸುವ ಬದಲು ' ಸಾಕ್ಷಿ ತೆಗೆದುಕೊಂಡು ಬನ್ನಿ' ಎಂದು ಹೇಳಿ ಪ್ರಕರಣಕ್ಕೆ ತಿಲಾಂಜಲಿ ನೀಡುತ್ತಿರುವುದು ದೊಡ್ಡಮಟ್ಟದ ಚರ್ಚೆಗೆ ಕಾರಣವಾಗಿದೆ. FIR ದಾಖಲಿಸಬೇಕು ಎಂದು ಹೇಳಿದರೆ ಪೊಲೀಸರು ಸಾಕ್ಷಿ ತೆಗೆದುಕೊಂಡು ಬನ್ನಿ, ಆಮೇಲೆ ನೋಡೋಣ ಎಂದರು, ತಕ್ಷಣ ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಂಡು ಸಂತ್ರಸ್ತೆಗೆ ನ್ಯಾಯ ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯ ಮಾಡಿರುವುದು.

**ಉತ್ತರ:**

ನೊಂದ ಮಹಿಳೆಯು ತನ್ನ ಮಗನೊಂದಿಗೆ ಕೂಡಿಕೊಂಡು ಉಗರಗೋಳ ಗ್ರಾಮದಲ್ಲಿ ತನ್ನ ಅತ್ತೆ, ಮೈದುನರು ಹಾಗೂ ನಾದಿನಿಯರೊಂದಿಗೆ ಒಟ್ಟಿಗೆ ವಾಸವಾಗಿರುತ್ತಾಳೆ. ನಂತರ ಸಂತ್ರಸ್ತೆಯ ಗಂಡನು ದಿನಾಂಕ: 29/12/2013 ರಂದು ತೀರಿಕೊಂಡ ನಂತರ ತನ್ನ ಗಂಡನ ಎಲ್ಲಾ ಆಸ್ತಿಯು ತನಗೆ ಬರಬೇಕೆಂದು ಅತ್ತೆ ಮತ್ತು ನಾದಿನಿಯರು ಹಾಗೂ ಮೈದುನರೊಂದಿಗೆ ತಂಟೆ ತಕರಾರು ಮಾಡುತ್ತಾ ಬಂದಿದ್ದು, ಜಮೀನಿನ ಕಬ್ಜಾ ವಹಿವಾಟಿನ ಸಲುವಾಗಿ ಮಾನ್ಯ ಸಿವಿಲ್ ನ್ಯಾಯಾಲಯ ಸವದತ್ತಿಯಲ್ಲಿ ದಾವೆ ಇದ್ದು, ಸದರಿಯವಳು ತನ್ನ ಗಂಡನ ಒಟ್ಟು ಎಲ್ಲಾ ಆಸ್ತಿಯು ತನಗೆ ಬರಬೇಕೆಂದು ವಾದಿಸುತ್ತಾ ಅವರೊಂದಿಗೆ ತಂಟೆ ತಕರಾರು ಮಾಡುತ್ತಿದ್ದಳು.

ಈ ವಿಷಯವಾಗಿ ಜಮೀನಿನ ರಿ.ಸಾ ನಂ: 49/3 ಕ್ಷೇತ್ರ 5 ಎಕರೆ 13 ಗುಂಟೆ ನೇದ್ದರ ಜಮೀನು ಎರಡು ಪಾರ್ಟಿ ಜನರ ಜಂಟಿ ಹೆಸರಿಲ್ಲಿನಲ್ಲಿದ್ದು, ಈ ಜಮೀನನ್ನು ನಾದನಿಯಾದ ಸವಿತಾ ಪಟ್ಟಣಶೆಟ್ಟಿ ಇವಳು ಉಳುಮೆ ಮಾಡಿಕೊಂಡು ಬಂದು ಅದನ್ನು ಲಾವಣಿ ಅಂತಾ ಸುರೇಶ ಹಾರೋಬೆಳವಡಿ ಸಾ: ಹಿರೇಕುಂಬಿ ಈತನಿಗೆ ಕೊಟ್ಟಾಗ ಅವನು ಆ ಜಮೀನನ್ನು ಉಳುಮೆ ಮಾಡಲು ಹೋದಾಗ ಸದರಿಯವನ ಮೇಲೆ ದಿನಾಂಕ: 18/06/2024 ರಂದು ಸವದತ್ತಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ:224/2024 ಕಲಂ: 143, 147, 323, 354(ಬಿ), 504, 506 ಸಹ 149 ಐಪಿಸಿ ನೇದ್ದರಡಿಯಲ್ಲಿ ಪ್ರಕರಣವು ದಾಖಲಾಗಿ ಮಾನ್ಯ ಜೆ.ಎಮ್.ಎಫ್.ಸಿ ನ್ಯಾಯಾಲಯ ಸವದತ್ತಿಯಲ್ಲಿ ವಿಚಾರಣೆಯಲ್ಲಿರುತ್ತದೆ.

ಅಲ್ಲದೇ ಹರ್ಲಾಪೂರ ಗ್ರಾಮದ ಹದ್ದಿನಲ್ಲಿ ಬರುವ ತನ್ನ ನಾದನಿ ಶ್ರೀಮತಿ ಸವಿತಾ ತಂದೆ ಚಂದ್ರಪ್ಪ @ ಚಂದ್ರಶೇಖರ ಪಟ್ಟಣಶೆಟ್ಟಿ ಇವರ ಮಾಲ್ಕೀಯ ಜಮೀನಿನ ರಿ.ಸಾ ನಂ: 49/01 ನೇದ್ದರ ಕ್ಷೇತ್ರ 4 ಎಕರೆ 35 ಗುಂಟೆ ಇದ್ದು, ಈ ಜಮೀನನ್ನು ಸವಿತಾ ತಂದೆ ಚಂದ್ರಪ್ಪ ಪಟ್ಟಣಶೆಟ್ಟಿ ಇವಳು ಉಳುಮೆ ಮಾಡಲು ಹರ್ಲಾಪೂರ ಗ್ರಾಮದ ಯಲ್ಲಪ್ಪಗೌಡ @ ಪುಟ್ಟಣಗೌಡ ತಂದೆ ಗುರುನಾಥ ಪಾಟೀಲ ಇವರಿಗೆ ಕಳೆದ ನಾಲ್ಕು ತಿಂಗಳ ಹಿಂದೆ ಲಾವಣಿಗೆ ಕೊಟ್ಟಿದ್ದು, ಸದರಿ ಜಮೀನಿನಲ್ಲಿ ಅವನು ಉಳುಮೆ ಮಾಡಿ ಬೆಳೆಯನ್ನು ಬೆಳೆದಿದ್ದು, ಆ ಜಮೀನಿನಲ್ಲಿ ಕೆಲಸ ಮಾಡುವಾಗ ಆತನು ನನ್ನ ಮೇಲೆ ಮಾನಭಂಗ ಮಾಡಲು ಬಂದಿರುತ್ತಾನೆ ಎಂದು ದಿನಾಂಕ: 11/01/2025 ರಂದು ಸವದತ್ತಿ ಪೊಲೀಸ ಅಪರಾಧ ಸಂಖ್ಯೆ-12/2025 ಕಲಂ: 115(2), 329(3), 74 ಬಿ.ಎನ್.ಎಸ್-2023 ನೇದ್ದರಡಿಯಲ್ಲಿ ಸಂತ್ರಸ್ಥ ಮಹಿಳೆಯು ಪ್ರಕರಣವನ್ನು ದಾಖಲಿಸಿದ್ದು, ಸದರಿ ಪ್ರಕರಣವು ತನಿಖೆಯಲ್ಲಿರುತ್ತದೆ.

ಹೀಗಿರುವಾಗ ಸದರಿ ಜಮೀನಿನ ಬಗ್ಗೆ ವ್ಯಾಜ್ಯ ಮಾನ್ಯ ನ್ಯಾಯಾಲಯದಲ್ಲಿರುವುದರಿಂದ ಹಾಗೂ ಹರ್ಲಾಪೂರ ಗ್ರಾಮದ ಹದ್ದಿನ ಜಮೀನಿನ ರಿ.ಸಾ ನಂ: 49/01 ನೇದ್ದರ ಕ್ಷೇತ್ರ 4 ಎಕರೆ 35 ನೇದ್ದರ ಜಮೀನು ನಾದಿನಿ ಶ್ರೀಮತಿ ಸವಿತಾ ತಂದೆ ಚಂದ್ರಪ್ಪ @ ಚಂದ್ರಶೇಖರ ಪಟ್ಟಣಶೆಟ್ಟಿ ಇವರ ಹೆಸರಿನಲ್ಲಿದ್ದು, ಈ ಜಮೀನಿನ ಕಬ್ಜಾ ವಹಿವಾಟಿನ ಸಲುವಾಗಿ ಯಾವುದೇ ತಂಟೆ ತಕರಾರು ಮಾಡದಂತೆ ಎರಡು ಪಾರ್ಟಿ ಜನರಿಗೆ ಕರೆಯಿಸಿ ವಿಚಾರಣೆ ಮಾಡಿ ಪೊಲೀಸರು ಸೂಕ್ತ ತಿಳುವಳಿಕೆ ನೀಡಿದ್ದು, ಅಲ್ಲದೇ ಸಂತ್ರಸ್ಥೆಗೆ ಈ ಜಮೀನಿನ ವ್ಯಾಜ್ಯ ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿರುವುದರಿಂದ, ನೀನು ಆ ಜಮೀನಿಗೆ ಹೋಗಿ ಅವರಿಗೆ ಅಡ್ಡಿ ಪಡಿಸಬೇಡ ಮತ್ತು ತಂಟೆ ತಕರಾರು ಮಾಡಬೇಡ ಎಂದು ತಿಳುವಳಿಕೆಯನ್ನು ಸಹ ನೀಡಲಾಗಿರುತ್ತದೆ.

ಹೀಗಿರುವಾಗ ದಿನಾಂಕ: 20/02/2025 ರಂದು ಹರ್ಲಾಪೂರ ಗ್ರಾಮದ ಹದ್ದಿನಲ್ಲಿ ಬರುವ ಸಂತ್ರಸ್ಥೆಯ ನಾದಿನಿ ಶ್ರೀಮತಿ ಸವಿತಾ ತಂದೆ ಚಂದ್ರಪ್ಪ@ ಚಂದ್ರಶೇಖರ ಪಟ್ಟಣಶೆಟ್ಟಿ ಇವರ ಮಾಲ್ಕೀಯ ಜಮೀನಿನ ರಿ.ಸಾ ನಂ: 49/01 ನೇದ್ದರ ಕ್ಷೇತ್ರ 4 ಎಕರೆ 25 ಗುಂಟೆ ಜಮೀನಿನಲ್ಲಿ ಕಡಲೆ ಬೆಳೆಯನ್ನು ಬೆಳೆದಿದ್ದು, ಜಮೀನಿನಲ್ಲಿ ಬೆಳೆದಿದ್ದ ಕಡಲೆ ಬೆಳೆಯನ್ನು ಕಿತ್ತುಕೊಂಡು ಟ್ರಾಕ್ಟರ್ ಗಾಡಿಯಲ್ಲಿ ಲೋಡ್ ಮಾಡಿಕೊಂಡು ಹೋಗುವಾಗ ಸಂತ್ರಸ್ಥೆಯು ಅಡ್ಡಿಪಡಿಸಿ, ಅವರೊಂದಿಗೆ ತಂಟೆ ತಕರಾರು ಮಾಡಿ, ನಂತರ ಅವಳು 112 ಸಹಾಯವಾಣಿಗೆ ಕರೆ ಮಾಡಿದ್ದರಿಂದ ಇ.ಆರ್.ಎಸ್.ಎಸ್ ಸಿಬ್ಬಂದಿಯವರ ಸಮ್ಮುಖದಲ್ಲಿ, ಅವಳು ತನ್ನ ಮೈಮೇಲಿನ ಬಟ್ಟೆಯನ್ನು ತಾನೇ ಹರಿದುಕೊಂಡು, ಇವರು ನನ್ನ ಬೆಳೆಯನ್ನು ಕಿತ್ತುಕೊಂಡು ಹೋಗುತ್ತಿದ್ದಾರೆ ಎಂದು ಜಗಳ ಮಾಡಿದ್ದರಿಂದ, ಆಗ ಎರಡು ಪಾರ್ಟಿ ಜನರಿಗೆ ಇ.ಆರ್.ಎಸ್.ಎಸ್ ಸಿಬ್ಬಂದಿಯವರು ಅವರನ್ನು ಠಾಣೆಗೆ ಕರೆದುಕೊಂಡು ಬಂದಿದ್ದು, ಪಿಐ ಸವದತ್ತಿ ಇವರು ಎರಡು ಪಾರ್ಟಿ ಜನರ ವಿಚಾರಣೆ ಮಾಡಿದಾಗ ನೊಂದ ಮಹಿಳೆಯು ತಾನು ಆಸ್ಪತ್ರೆಗೆ ಹೋಗಿ ತೋರಿಸಿಕೊಂಡು ಬರುತ್ತೇನೆ ಎಂದು ಹೇಳಿ ಹೋಗಿರುತ್ತಾಳೆ.

ದಿನಾಂಕ: 21/02/2025 ರಂದು ಸಾರ್ವಜನಿಕ ತಾಲೂಕ ಆಸ್ಪತ್ರೆ ಸವದತ್ತಿ ಹಾಗೂ ಜಿಲ್ಲಾ ಆಸ್ಪತ್ರೆ ಧಾರವಾಡದಿಂದ ಎಮ್.ಎಲ್.ಸಿ ಯಾದಿಯಾಗಿ ಬಂದಿದ್ದರಿಂದ ಪೊಲೀಸ್ ಠಾಣೆಯ ಎಸ್‌ಎಚ್‌ಓ ಕೂಡಲೇ ಆಸ್ಪತ್ರೆಗೆ ಭೇಟಿ ನೀಡಿ ಸಂತ್ರಸ್ತೆಯನ್ನು ವಿಚಾರಣೆ ಮಾಡಲಾಗಿ ಸಂತ್ರಸ್ಥೆಯು ಈ ಬಗ್ಗೆ ನಾನು ನಮ್ಮೂರ ಹಿರಿಯರನ್ನು ವಿಚಾರಣೆ ಮಾಡಿ ಪಿರ್ಯಾದಿ ನೀಡುತ್ತೇನೆ. ಸದ್ಯಕ್ಕೆ ನನ್ನದು ಯಾವುದೇ ಪಿರ್ಯಾದಿ ವಗೈರೆ ಇರುವುದಿಲ್ಲ ಎಂದು ಮೌಖಿಕವಾಗಿ ತಿಳಿಸಿದ್ದು, ಅದನ್ನು ಠಾಣಾ ಎಸ್.ಎಚ್.ಡಿಯಲ್ಲಿ ನಮೂದು ಮಾಡಲಾಗಿರುತ್ತದೆ.

ಸದರಿ ತಂಟೆಗೆ ಕಾರಣವಾದ ಜಮೀನು ಸಂತ್ರಸ್ಥೆಯ ನಾದಿನಿ ಹೆಸರಿನಲ್ಲಿದ್ದು, ಆ ಜಮೀನಿಗೆ ಹೋಗಿ ಅವರಿಗೆ ಅಡ್ಡಿಪಡಿಸಬೇಡ ಮತ್ತು ತಂಟೆ ತಕರಾರು ಮಾಡಬೇಡ ಎಂದು ಪೊಲೀಸರು ತಿಳಿಸಿದ್ದರೂ ಕೂಡಾ ನೊಂದ ಮಹಿಳೆಯು ಎರಡು ಬಾರಿ ಅಂಗವಿಕಲೆಯಾದ ಸವಿತಾ ಪಟ್ಟಣಶೆಟ್ಟಿ ಅವರಿಗೆ ತೊಂದರೆ ನೀಡಿದ್ದು ಇರುತ್ತದೆ. ಸದರಿ ಜಮೀನಿನ ವಿಷಯವಾಗಿ ಏನಾದರೂ ತಗಾದೆ ಇದ್ದರೆ ಅದನ್ನು ನ್ಯಾಯಾಲಯದ ಮೊರೆ ಹೋಗಲು ತಿಳಿಸಿ ಹೇಳಿದ್ದರೂ ಸಹ ಪದೇ-ಪದೇ ಅಂಗವಿಕಲೆಯಾದ ನಾದಿನಿಗೆ ತೊಂದರೆ ನೀಡಿ ಮತ್ತು ಉಳುಮೆ ಮಾಡುವ ಜನರ ಮೇಲೆ ಕೇಸು ದಾಖಲಿಸುತ್ತಾ ಬಂದಿರುತ್ತಾಳೆ. ದಿನಾಂಕ: 21.02.2025 ರಂದು ಧಾರವಾಡ ಜಿಲ್ಲೆಯಲ್ಲಿ ಚಿಕಿತ್ಸೆ ಕುರಿತು ಸಂತ್ರಸ್ತೆಯು ದಾಖಲಾಗಿದ್ದು, ಈ ಬಗ್ಗೆ ಠಾಣೆಗೆ ಎಮ್‌ಎಲ್‌ಸಿ ಬಂದ ತಕ್ಷಣ ಎಸ್‌ಎಚ್‌ಓ ರವರು ಆಸ್ಪತ್ರೆಗೆ ಭೇಟಿ ನೀಡಿ ಪಿರ್ಯಾದಿ ನೀಡಲು ತಿಳಿಸಿದರೂ ಸಹ ನಿರಾಕರಿಸಿರುತ್ತಾಳೆ. ದಿನಾಂಕ:13.03.2025 ರಂದು ಸಂತ್ರಸ್ಥೆಯು ಪೊಲೀಸ್ ಠಾಣೆಗೆ ಹೋಗಿದ್ದು, ಅವರಿಗೆ ಪಿರ್ಯಾದಿ ಬರೆದು ಕೊಡಲು ಹೇಳಿದಾಗ ತಾನು ಲಾಯರ್ ರವರನ್ನು ಕರೆದುಕೊಂಡು ಬರುತ್ತೇನೆ ಎಂದು ಹೇಳಿ ಹೋಗಿದ್ದು, ನಂತರ ಪೊಲೀಸ್ ಠಾಣೆಗೆ ಬಂದಿರುವುದಿಲ್ಲ. ಆದರೆ ದಿನಾಂಕ:18.03.2025 ರಂದು ನೊಂದ ಮಹಿಳೆ ಪೊಲೀಸ್ ಠಾಣೆಗೆ ಬಂದು ನೀಡಿದ ಫಿರ್ಯಾದಿ ಅನ್ವಯ ಸವದತ್ತಿ ಪೊಲೀಸ್ ಠಾಣೆ ಅಪರಾಧ : 97/2025 ಕಲಂ 189(2), 191(2), 115(2), 76, 352, 351(2), 190 ಬಿ.ಎನ್. ಎಸ್. 2023 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿರುತ್ತದೆ.

ಸಂಖ್ಯೆ:ಹೆಚ್‌ಡಿ 24 ಎಸ್‌ಡಿಎನ್ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು